# ದೂರು ಮಾಡುವರೇನೆ

(Version 3)

1. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 116
2. **Note:** These lyrics are having different wordings from that of other two versions. In this version, Ankita is also different from the other two versions.
3. **Note:** Singer has followed these lyrics.

ರಾಗ: ಕೇದಾರಗೌಳ ತಾಳ: ಛಾಪು

ದೂರು ಮಾಡುವರೇನೆ ರಂಗಯ್ಯನ ॥ ಪ ॥

ದೂರು ಮಾಡುವರೇನೆ ಚೋರನೆಂದಿವನನು
ಮೂರು ಲೋಕಕೆ ಮುದ್ದು ತೋರೋ ರಂಗಯ್ಯನ ॥ ಅಪ ॥

ನಂದಗೋಕುಲದಲ್ಲಿ ಮಂದೆ ಗೋವುಗಳ
ಮುಂದೆ ಕೊಳಲನೂದಿ ಚಂದದಿ ಬರುವನ ॥ ೧ ॥

ಗೊಲ್ಲರ ಮನೆಗಳ ಕಳ್ಳತನದಿ ಪೊಕ್ಕು
ಗುಲ್ಲು ಮಾಡುತಲವರ ಗಲ್ಲ ಕಚ್ಚುವನೆಂದು ॥ ೨ ॥

ಕಾಮದಿಂದಲಿ ನಿನ್ನ ಕಳವಳತನಕಾಗಿ
ಶ್ಯಾಮಸುಂದರ ಶ್ರೀ ಪುರಂದರ ವಿಠ್ಠಲನ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಯಶೋದೆ ಗೋಪಿಯರನ್ನು ಕೇಳಿದ ಮಾತು.

**ತೋರೋ** – ತೋರುವ.

**ನಂದದಿ** – ಆನಂದದಿಂದ.

**ಗುಲ್ಲು** – ಗದ್ದಲ; ದನಿಯೇರಿಸಿದ ಮಾತು.

**ಕಾಮದಿಂದಲಿ** – ಮನಸ್ಸಿಗೆ ಬಂದಂತೆ, ನಿನ್ನಲ್ಲೇ ಕಾಮವಿದ್ದು.

**ಕಳವಳತನ** – ಮನಸ್ಸಿನ ಉದ್ವೇಗ, ಬಯಕೆ.

**Classification:** Keerthane
**Ankita:** Sri Purandara Vittala
**Location:** NA
**Category:** Krishna Leele
**Sub-Category:** Krishna, ranga, kalla, loka, kolalu, mane, yashode, gopi
**Pravachana:** NA
**Explanation:** NA